# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:5033/2019** ಪ್ರಾಸಾ-37

ಚಾಸಾ-40

ದಿನಾಂಕ:24-01-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಹೆಸರು | ಬಿ ಎಸ್ ರಂಗಯ್ಯ |
| ತಂದೆಯ ಹೆಸರು | ಸಿದ್ದಯ್ಯ |
| ವಯಸ್ಸು | 59 |
| ಉದ್ಯೋಗ | ಕಿರಿಯ ಇಂಜೀನಿಯರ್ |
| ವಾಸಸ್ಥಳ | ಚನ್ನರಾಯಪಟ್ಟಣ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ :-**

ನಾನು 2003 ರಿಂದ ಇಲ್ಲಿಯವರೆಗೂ ಚನ್ನರಾಯಪಟ್ಟಣ ಲೋಕೋಪಯೋಗಿ ಇಲಾಖೆ ಉಪವಿಭಾಗದಲ್ಲಿ ಕಿರಿಯ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಪೊಲೀಸ ಉಪಾಧೀಕ್ಷಕರು ಮಧುಗಿರಿ ಇವರಿಂದ ದಿನಾಂಕ:24-01-2019 ರಂದು ಕೃತ್ಯ ಸ್ಥಳದ ಚನ್ನರಾಯಪಟ್ಟಣದ ಕೃತಿಕಾ ಲಾಡ್ಜನ ಬಾಬ್ತು ಸ್ಥಳದ ನಕ್ಷೆಯನ್ನು ತಯಾರಿಸಿ ಕೊಡುವಂತೆ ಮನವಿ ಸಲ್ಲಿಸಿದ್ದರು. ದಿನಾಂಕ:04-02-2019 ರಂದು ನಾನು ಕೊರಟಗೆರೆ ಪೊಲೀಸ ಪೇದೆ ದೊಡ್ಡಲಿಂಗಯ್ಯ ಚಾಸಾ-58 ರವರ ಜೊತೆ ಕೃತಿಕಾ ಲಾಡ್ಜ ಗೆ ಭೇಟಿ ನೀಡಿದ್ದೇನೆ. ಅಲ್ಲಿ ಲಾಡ್ಜನ 3 ನೇ ಮಹಡಿಯಲ್ಲಿ ಇದ್ದ ಕೊಠಡಿ ಸಂಖ್ಯೆ:126 ಅನ್ನು ನೋಡಿ ಅದರ ಒಂದು ಪಾಕ್ಷಿಕಾ ನಕಾಶೆಯನ್ನು ತಯಾರಿಸಿದ್ದೇನೆ. ಆ

ನಕಾಶೆಯನ್ನು ನಮ್ಮ ಸಹಾಯಕ ಕಾರ್ಯ ಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಚನ್ನರಾಯಪಟ್ಟಣ ಇವರಿಗೆ ಸಲ್ಲಿಸಿದ್ದೇನೆ. ಅವರು ಅದನ್ನು ಕವಚ ಪತ್ರದ ಜೊತೆಗೆ ಆರಕ್ಷಕ ಉಪಾಧೀಕ್ಷಕರು ಮಧುಗಿರಿ ಇವರಿಗೆ ಸಲ್ಲಿಸಿರುತ್ತಾರೆ. ನಾನು ತಯಾರಿಸಿದ ನಕಾಶೆ ಮತ್ತು ಕವಚ ಪತ್ರವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಕವಚ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-76 ಎಂದು ಗುರುತಿಸಲಾಯಿತು ಮತ್ತು ಕಾಕ್ಷಿಕ ನಕಾಶೆಯನ್ನು ನಿಪಿ-77 ಎಂದು ಗುರುತಿಸಲಾಯಿತು. ಮತ್ತು ಸಾಕ್ಷಿಯ ಸಹಿಯನ್ನು ನಿಪಿ-77(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲು ಶ್ರೀ.TSK ವಕೀಲರಿಂದ ಆರೋಪಿಗಳ ಪರವಾಗಿಃ-**

ಪೊಲೀಸ ಉಪಾಧೀಕ್ಷಕರು ನೀಡಿದ ಮನವಿ ಪತ್ರವನ್ನು ನಾವೇ ಇಟ್ಟುಕೊಂಡಿದ್ದೇವೆ. ಚಾಸಾ-58 ರವರು ಮೊದಲು ನಮ್ಮ ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ಭೇಟಿ ಮಾಡಿದ್ದರು. ಚಾಸಾ-58 ನಮ್ಮ ಕಛೇರಿಗೆ ಯಾವತ್ತೂ ಬಂದಿದ್ದರು ಎಂದು ಹೇಳಲು ಆಗುವುದಿಲ್ಲ. ನಕ್ಷೆ ಮಾಡುವಾಗ ನನ್ನ ಜೊತೆ ಲಾಡ್ಜಗೆ ಬಂದಿದ್ದ ಚಾಸಾ-58 ಬಳಿಕ ಎಲ್ಲಿಗೆ ಹೋದರು ಎಂದು ನನಗೆ ಗೊತ್ತಿಲ್ಲ. ಚಾಸಾ-58 ಮೊದಲು ಲಾಡ್ಜ ಗೆ ಭೇಟಿ ನೀಡಿದ್ದರೂ ಎಂದು ನಾನು ವಿಚಾರ ಮಾಡಿಲ್ಲ. ಚಾಸಾ-58 ನನ್ನನ್ನು ಕಛೇರಿಗೆ ಬಂದು ಅಲ್ಲಿಂದ ಲಾಡ್ಜಗೆ ಕರೆದುಕೊಂಡು ಹೋದರು. ನಾವು ದೊಡ್ಡಲಿಂಗಯ್ಯನವರಿಗೆ ಬಂದು ಸ್ಥಳವನ್ನು ತೋರಿಸಿ ಎಂದು ನೋಟೀಸ್ ನೀಡಿಲ್ಲ. ಮನವಿ ಪತ್ರ ಸ್ವೀಕರಿಸಿದ ಬಳಿಕ ಕೊರಟಗೆರೆ ಠಾಣೆಯ ಸಿಬ್ಬಂದಿಗೂ ನಮ್ಮ ಕಛೇರಿಗೂ ಏನೇನು ಪತ್ರ ವ್ಯವಹಾರ ನಡೆಯಿತು ಎಂದು ನನಗೆ ಗೊತ್ತಿಲ್ಲ. ನಾನು ಲಾಡ್ಜನಲ್ಲೇ ಅಳತೆ ಮಾಡಿ ನಕ್ಷೆಯನ್ನು ತಯಾರಿಸಿದ್ದೇನೆ. ನಾನು ನಕ್ಷೆ ತಯಾರಿಸಲು ಹೋದಾಗ ಕೊಠಡಿಯ ಕೀ ನೀಡಿದ್ದಾರೆ, ರೂಂ ಬಾಯ್ಸ ಇರಲಿಲ್ಲ. ಲಾಡ್ಜನ ಸಿಬ್ಬಂದಿ ಕೊಠಡಿ ಬಾಗಿಲು ತೆಗೆದು ಕೊಟ್ಟಿದ್ದಾರೆ. ಚಾಸಾ-58 ಇದೇ ಕೊಠಡಿಯಲ್ಲಿ ಕೃತ್ಯ ನಡೆದಿದ್ದು ಎಂದು ಹೇಳಿದ ಮೇರೆಗೆ ನಾನು ಆ ಕೊಠಡಿಯ ನಕಾಶೆ ತಯಾರಿಸಿದ್ದೇನೆ. ಆ

ಲಾಡ್ಜನಲ್ಲಿ ಒಟ್ಟು ಎಷ್ಟು ಕೊಠಡಿಗಳು ಇವೆ ಎಂದು ನಾನು ಪರಿಶೀಲನೆ ಮಾಡಿಲ್ಲ. ನಾನು ನಕ್ಕೆ ತಯಾರಿಸಿದ ದಿನವೇ ಅದನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸಲ್ಲಿಸಿದ್ದೇನೆ. ನನ್ನ ಕಛೇರಿ ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಒಂದೇ ಕಟ್ಟದಲ್ಲಿ ಇದೆ. ನಾನು ನಕಾಶೆಯನ್ನು ಕವಚ ಪತ್ರದ ಜೊತೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ನೀಡಿದ್ದೇನೆ. ಚಾಸಾ-58 ಬೆಳಿಗ್ಗೆ 11:30 ಗೆ ಬಂದಿದ್ದರು. ನಾನು ನಕಾಶೆ ತಯಾರಿಸಿ ಸುಮಾರು 12:00 ರಿಂದ 12:30 ವರೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ನೀಡಿದ್ದೇನೆ. ನಾವು ಸ್ಥಳಿಯವಾಗಿ ಕಛೇರಿ ಬಿಟ್ಟು ಹೊರಗಡೆ ಬಂದಾಗ ಮೂಮೆಂಟ್ ರಿಜಿಸ್ಟರ್ ನಲ್ಲಿ ಸಹಿ ಮಾಡವ ಕ್ರಮ ಇಲ್ಲ. ನಾವು ಕಛೇರಿಯಲ್ಲಿ ಟಪಾಲು ವ್ಯವಸ್ಥೆ ಮಾಡಿಕೊಂಡಿದ್ದೇನೆ. ಕವಚ ಪತ್ರ ಮತ್ತು ನಕ್ಷೆ ಸಹಾಯಕ ಕಾರ್ಯಪಾಲಕ ಅಭಿಯಂತರರಿ ಕಛೇರಿಯಿಂದ ಪೊಲೀಸ ಉಪಾಧೀಕ್ಷರ ಕಛೇರಿಗೆ ಯಾವ ರೀತಿ ಹೊಯಿತು ಎಂದು ನನಗೆ ಗೊತ್ತಿಲ್ಲ. ಚಾಸಾ-58 ಸ್ಥಳ ತೋರಿಸಿ ಹೊರಟು ಹೋಗಿದ್ದಾರೆ. ದಿನಾಂಕ:04-02-2019 ರಂದು ಅಥವಾ ದಿನಾಂಕ:05-02-2019 ರಂದು ಚಾಸಾ-58 ರವರನ್ನು ನಾನು ನನ್ನ ಕಛೇರಿಯಲ್ಲಿ ನೋಡಿಲ್ಲ. ನಾನು ನಿಪಿ-77 ಸ್ಕೆಚ್ ಅನ್ನು ತಯಾರು ಮಾಡಲೇ ಇಲ್ಲ ಮುತ್ತ ನಾನು ಕೃತಿಕಾ ಲಾಡ್ಜಗೆ ಭೇಟಿ ನೀಡಿಲೇ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**